ದಿನಾಂಕಃ **15/07/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ **1**ನೇ ಎದುರುದಾರರ ಪರ ವಕೀಲರಿಂದಃ

ನಾನು 2ನೇ PUC ಓದಿದ್ದೇನೆ. ನನ್ನ SSLC Marks card ಅನ್ನು ಹಾಜರು ಮಾಡಲು ತೊಂದರೆ ಇಲ್ಲ. ನಾನು ಬೈಕ್ ಓಡಿಸಲು D.L ಇದೆ. D.L ಅನ್ನು ಎಲ್ಲಿ ಮಾಡಿಸಿದ್ದೇನೆ ಎಂದು ಗೊತ್ತಿಲ್ಲ. LLR ಅನ್ನು ನಾನು 19 ವರ್ಷ ಇದ್ದಾಗ ಮಾಡಿಸಿದ್ದೆ. D.L copy ಅನ್ನು ಹಾಜರು ಮಾಡಿಲ್ಲ. ಹಾಜರು ಮಾಡಲು ತೊಂದರೆ ಇಲ್ಲ. ಆ ದಿನ ನಾನು ಒಬ್ಬನೇ ಹೋಗುತಿದ್ದೆ. ನಾನು ಹೆಬ್ಬಾಲೆಯಿಂದ ಗಂಗನಾಳಿಗೆ ಹೋಗುತಿದ್ದೆ. ರಸ್ತೆ ಪೂರ್ವ ಪಶ್ಚಿಮವಾಗಿ ಇದೆ ಎಂದರೆ ನಿಜ. ಸುಮಾರು 30-35 ಅಡಿ ಅಗಲ ಇದೆ ಎಂದರೆ ನಿಜ. ಆ ರಸ್ತೆಯಲ್ಲಿ ಎದುರುಗಡೆಯಿಂದ ಬರುವ ವಾಹನಗಳು ಕಾಣುತ್ತವೆ ಎಂದರೆ ಸರಿಯಲ್ಲ. ರಸ್ತೆಯ ಎಡಭಾಗದಲ್ಲಿ ಅಪಘಾತ ಆಗಿದೆ. ಯಾವ ದಿಕ್ಕಿನಲ್ಲಿ ಎಂದು ಗೊತ್ತಿಲ್ಲ. ಅಪಘಾತಪಡಿಸಿದ ವಾಹನ ಗಂಗನಾಳು ಕಡೆಯಿಂದ ಬರುತಿತ್ತು. ವಾಹನ ಬರುತಿದ್ದ ದಕ್ಷಿಣ ಭಾಗದಲ್ಲಿ ಅಪಘಾತ ಆಗಿದೆ ಎಂದರೆ ಗೊತ್ತಿಲ್ಲ. ಅಪಘಾತಪಡಿಸಿದ ವಾಹನದ ನಂ.KA-13-TC-8768. ಅದು ಟ್ರ್ಯಾಕ್ಟರ್. ಆ ವಾಹನವನ್ನು ಚಾಲನೆ ಮಾಡುತಿದ್ದವರು ಯಾರು ಎಂದು ಗೊತ್ತಿಲ್ಲ. ಅಪಘಾತವಾದ ಸ್ಥಳದಲ್ಲಿ ಯಾರು ಇದ್ದರು ಎಂದರೆ ಹೆಬ್ಬಾಲೆಯವರು ಇದ್ದರು. ಅವರ ಹೆಸರು ಗೊತ್ತಿಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ನನ್ನ ತಂದೆ ದೂರನ್ನು ಕೊಟ್ಟರು. ಅವರಿಗೆ ಅಪಘಾತವಾದ ವಿಚಾರವನ್ನು ಹೆಬ್ಬಾಲೆಯವರು ಹೇಳಿದರು. ಅವರು ನನ್ನ ತಂದೆಗೆ ಪರಿಚಯಸ್ತರು. ಅಲ್ಲಿಯವರೆಗೂ ನಾನು ಅಲ್ಲೇ ಇದ್ದೆನು. ನನ್ನ ತಂದೆ ಬಂದಾಗ ಅಪಘಾತವಾದ ಸ್ಥಳದಲ್ಲಿ ವಾಹನ ಇರಲಿಲ್ಲ. ವಾಹನದ ಸಂಖ್ಯೆಯನ್ನು ನಾನೇ ನೋಡಿದ್ದೆನು. ನಿಪಿ-26 ಮತ್ತು 28 ರ ರಶೀದಿ ಸಂಖ್ಯೆ ಒಂದೇ ಎಂದರೆ ನಿಜ. ಮೊದಲು ನಾನು ಅರಕಲಗೂಡಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ನಂತರ ಹಾಸನದ ಆಸ್ಪತ್ರೆಗೆ ಹೋಗಿದ್ದೆನು. ನನಗೆ 2 ಬಾರಿ ಕಣ್ಣು ಮತ್ತು ಕಾಲಿನ ಹತ್ತಿರ ಹಾಸನದಲ್ಲಿ ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಅದರ ಬಗ್ಗೆ X-ray ಅನ್ನು ಹಾಕಿದ್ದೇನೆ. ಆ ರೀತಿ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಹೆಲ್ಮೆಟ್ ಅನ್ನು ಹಾಕಿರಲಿಲ್ಲ. ಹೆಲ್ಮೆಟ್ ಧರಿಸಿದ್ದರೆ ನನ್ನ ಮುಖಕ್ಕೆ ಆದ ಗಾಯಗಳನ್ನು ತಡೆಯಬಹುದಾಗಿತ್ತು ಎಂದರೆ ನಿಜ. ಹೆಲ್ಮೆಟ್ ಧರಿಸದೆ ಬೈಕ್ ಚಾಲನೆ ಮಾಡುವುದು ಅಪರಾಧ

ಎಂದರೆ ನಿಜ. ನಿಪಿ-54 ರಲ್ಲಿ GST ಬಿಲ್ ಇಲ್ಲ ಎಂದರೆ ನಿಜ. ವೈದ್ಯರ ಸಲಹಾ ಚೀಟಿಯ ಆಧಾರದ ಮೇಲೆ ನಿಪಿ-55 ನ್ನು ಪಡೆದಿಲ್ಲ ಎಂದರೆ ನಿಜ. ಆ ದಿನ ಟ್ರ್ಯಾಕ್ಟರ್ ಅನ್ನು ಕೃಷ್ಣ ಬಿನ್ ಗಿರೀಗೌಡ ಎನ್ನುವವರು ಚಾಲನೆ ಮಾಡುತಿದ್ದರು ಎಂದರೆ ಗೊತ್ತಿಲ್ಲ. ಟ್ರ್ಯಾಕ್ಟರ್ ಚಲಾಯಿಸುತಿದ್ದ ಕೃಷ್ಣ ಬಿನ್ ಗಿರೀಗೌಡ ರವರಿಗೆ D.L ಕೂಡ ಇತ್ತು ಎಂದರೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ಎಷ್ಟು ಖರ್ಚು ಆಗಿದೆ ಎಂದು ಹೇಳಲು ಆಗುವುದಿಲ್ಲ. ನಾನು ಹಾಲಿನ ವ್ಯಾಪಾರ ಮಾಡುತಿದ್ದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ವ್ಯವಸಾಯ ಮಾಡುತಿದ್ದ ಬಗ್ಗೆ ಜಮೀನು ದಾಖಲಾತಿ ಹಾಜರು ಮಾಡಿಲ್ಲ. ಆ ದಿನ ರಸ್ತೆಯಲ್ಲಿ ನಾನು ನನ್ನ ವಾಹನವನ್ನು ಅತೀ ವೇಗದಿಂದ ಚಾಲನೆ ಮಾಡಿ ಎದುರುಗಡೆ ವಾಹನಕ್ಕೆ ಡಿಕ್ಕಿ ಪಡಿಸಿದ ಕಾರಣಕ್ಕೆ ಅಪಘಾತ ಆಯಿತು ಎಂದರೆ ಸರಿಯಲ್ಲ. ಅಪಘಾತಕ್ಕೆ ನನ್ನ ತಪ್ಪು ಇರುವುದರಿಂದ 1ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ಲೋಕೇಶ ಎಂ.ಜಿ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು